# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (395) 328

ಸದಸ್ಯರ ಹೆಸರು : ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 23-09-2020

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ತಾಲ್ಲೂಕು ಕಛೇರಿಯಲ್ಲಿರುವ ಅಧಿಕಾರಿಗಳು ಸರ್ಕಾರಿ ಜಮೀನುಗಳನ್ನು ಖಾಸಗಿಯವರಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಇಡೀ ದೇವನಹಳ್ಳಿ ತಾಲ್ಲೂಕಿನಲ್ಲಿ ಅಂತಹ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ; ಅವು ಯಾವುವು? (ವಿವರಗಳನ್ನು ಪ್ರಕರಣವಾರು ನೀಡುವುದು) | ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನಲ್ಲಿ ಕಳೆದ 10 ತಿಂಗಳಲ್ಲಿ ಒಟ್ಟು 15 ಅನುಮಾನಾಸ್ಪದ ಪ್ರಕರಣಗಳನ್ನು ಪತ್ತೆ ಮಾಡಲಾಗಿದ್ದು, ಇವುಗಳ ಒಟ್ಟು ವಿಸ್ತೀರ್ಣ 84-14 1/2 ಎ-ಗುಂ ಇದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.<br>1) ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಕೊಂಡೇನಹಳ್ಳಿ ಗ್ರಾಮದ ಸ.ನಂ.24ರಲ್ಲಿ 5-13 ಎ-ಗುಂ ಜಮೀನಿನ ಮಂಜೂರಾತಿ ದಾಖಲಾತಿಗಳ ನೈಜತೆ ಅನುಮಾನಾಸ್ಪದವಾಗಿರುವುದರಿಂದ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಅಭಿಪ್ರಾಯ ಪಡೆದು ಕ್ರಮ ವಹಿಸಲಾಗುವುದು.<br>2) ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಹರಳೂರು ಗ್ರಾಮದ ಸ.ನಂ.37 ರಲ್ಲಿ 5-39 ಎ-ಗುಂ ಜಮೀನಿನ ಮಂಜೂರಾತಿ ದಾಖಲಾತಿಗಳ ನೈಜತೆ ಅನುಮಾನಾಸ್ಪದವಾಗಿರುವುದರಿಂದ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪತ್ರ ಬರೆದು ಅಭಿಪ್ರಾಯ ಪಡೆದು ಕ್ರಮ ವಹಿಸಲಾಗುವುದು.<br>3) ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ವೆಂಕಟಾಪುರಗ್ರಾಮದ ಸ.ನಂ.17 ರಲ್ಲಿ 4-00 ಎಕರೆ ಜಮೀನಿನ ಬಗ್ಗೆ ನ್ಯಾಯಾಲಯದ ಆದೇಶವನ್ನು ಅಕ್ರಮವಾಗಿ ತಿದ್ದುಪಡಿ ಮಾಡಿರುವವರ ವಿರುದ್ಧ ಎಫ್.ಐ.ಆರ್. ದಾಖಲಿಸಲು ಕುಂದಾಣ ಪೋಲಿಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರಿಗೆ ಪತ್ರ ಸಂ:ಆರ್‌ಆರ್‌ಟಿ.ಸಿಆರ್.79/2019-20, ದಿ: 03.09.2020ರ ಪ್ರಕಾರ ಪತ್ರ ಬರೆಯಲಾಗಿದೆ. |

......2

| | | |
|---|---|---|
| | | 4) ದೇವನಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಸಣ್ಣಅಮಾನಿಕೆರೆ ಗ್ರಾಮದ ಸ.ನಂ.104/3 ರಲ್ಲಿ 0-14 1/2 ಗುಂಟೆ ಜಮೀನಿನ ಬಗ್ಗೆ ನ್ಯಾಯಾಲಯದ ಆದೇಶವನ್ನು ಆಕ್ರಮವಾಗಿ ತಿದ್ದುಪಡಿ ಮಾಡಿರುವವರ ವಿರುದ್ಧ ಎಫ್.ಐ.ಆರ್. ದಾಖಲಿಸಲು ಕುಂದಾಣ ಪೋಲಿಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರಿಗೆ ಪತ್ರ ಸಂ:ಆರ್‌ಆರ್‌ಟಿ.ಸಿಆರ್.08/2020-21, ದಿ: 04.08.2020ರ ಪ್ರಕಾರ ಪತ್ರ ಬರೆಯಲಾಗಿದೆ.<br>5) ದೇವನಹಳ್ಳಿ ತಾಲ್ಲೂಕು ಕಸಬಾ ಹೋಬಳಿ ದಾಸರಹಳ್ಳಿ ಗ್ರಾಮದ ಸ.ನಂ.36 ರಲ್ಲಿ 22-00 ಎಕರೆ ಜಮೀನಿನ ಮಂಜೂರಾತಿಯು ಅನುಮಾನಾಸ್ಪದವಾಗಿರುವುದರಿಂದ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪತ್ರ ಬರೆದಿದ್ದು, ಅಭಿಪ್ರಾಯ ಪಡೆದು ಕ್ರಮ ವಹಿಸಲಾಗುವುದು.<br>6) ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿ, ಪೋಲನಹಳ್ಳಿ ಗ್ರಾಮದ ಸ.ನಂ.1 ರಲ್ಲಿ 14-38 ಎ-ಗುಂ,<br>7) ಯಂಬ್ರಹಳ್ಳಿ ಗ್ರಾಮದ ಸ.ನಂ.95 ರಲ್ಲಿ 1-00 ಎಕರೆ<br>8) ಚಿಕ್ಕೋಬನಹಳ್ಳಿ ಗ್ರಾಮದ ಸ.ನಂ.14 ರಲ್ಲಿ 1-00 ಎಕರೆ<br>9) ಬೂದಿಗೆರೆಗ್ರಾಮದ ಸ.ನಂ.215 ರಲ್ಲಿ 4-20 ಎ-ಗುಂ<br>10) ಯರ್ತಿಗಾನಹಳ್ಳಿ ಗ್ರಾಮದ ಸ.ನಂ.55 ರಲ್ಲಿ 5-00 ಎಕರೆ<br>11) ಬೆಟ್ಟಕೋಟೆಗ್ರಾಮದ ಸ.ನಂ.1 ರಲ್ಲಿ 2-20 ಎ-ಗುಂ<br>12) ಹರಳೂರು ಗ್ರಾಮದ ಸ.ನಂ.37 ರಲ್ಲಿ 3-10 ಎ-ಗುಂ<br>13) ದೇವನಹಳ್ಳಿ ಗ್ರಾಮದ ಸ.ನಂ.393 ರಲ್ಲಿ 2-20 ಎ-ಗುಂ<br>ಕ್ರ.ಸಂ.6 ರಿಂದ 13 ರವರೆಗಿನ ಜಮೀನುಗಳ ಮಂಜೂರಾತಿಯ ನೈಜತೆ ಅನುಮಾನಾಸ್ಪದವಾಗಿರುವುದರಿಂದ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪತ್ರ ಬರೆಯಲು ದೇವನಹಳ್ಳಿ ತಾಲ್ಲೂಕು ತಹಸೀಲ್ದಾರ್ ರವರುಸಂ:ಎಲ್‌ಎನ್‌ಡಿ. ಸಿಆರ್.306/2020-21, ದಿ: 01.05.2020ರಂತೆ ಅನುಮತಿ ಕೋರಿದ ಮೇರೆಗೆ, ಜಿಲ್ಲಾಧಿಕಾರಿಗಳ ಕಛೇರಿಯಿಂದ ಅನುಮತಿ ನೀಡಿದ್ದು, ವಿಧಿ ವಿಜ್ಞಾನ ಪ್ರಯೋಗಾಲಯದ ಅಭಿಪ್ರಾಯ ಪಡೆದು ಕ್ರಮ ವಹಿಸಲಾಗುವುದು. |

| | | |
|---|---|---|
| | | 14) ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ ಬೆಟ್ಟಕೋಟೆ ಗ್ರಾಮದ ಸ.ನಂ.1 ರ ಪೈಕಿ 4-00 ಎಕರೆ ಜಮೀನಿನ ಮ್ಯುಟೇಶನ್ ಅನುಮಾನಾಸ್ಪದವಾಗಿರುವ ಬಗ್ಗೆ ಚನ್ನರಾಯಪಟ್ಟಣ ಪೋಲಿಸ್ ಠಾಣೆಯಲ್ಲಿ ಪತ್ರ ಸಂ:ಎಂಎಜಿ.ಸಿಆರ್.73/2019-20, ದಿ: 15.10.2019 ಮತ್ತು 24.12.2019ರಂತೆ ಪತ್ರ ಬರೆದು ಎಫ್.ಐ.ಆರ್ ದಾಖಲಿಸಲಾಗಿದೆ.<br>15) ವಿಶೇಷ ಭೂ ಸ್ವಾಧೀನಾಧಿಕಾರಿ, ಕೆಐಎಡಿಬಿ, ಬೆಂಗಳೂರು ರವರು ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿ ಬಿ.ಕೆ. ಪಾಳ್ಯ ಗ್ರಾಮದ ಸ.ನಂ.7ರ ಪೈಕಿ 8-00 ಎಕರೆ ಜಮೀನಿನ ನೈಜತೆಯ ಬಗ್ಗೆ ಮಾಹಿತಿ ಕೇಳಿದ್ದು, ಸದರಿ ಜಮೀನಿನ ಮಂಜೂರಾತಿಯು ಅನುಮಾನಾಸ್ಪದವಾಗಿರುತ್ತದೆಂದು ವಿಧಿವಿಜ್ಞಾನ ಪ್ರಯೋಗಾಲಯದ ಅಭಿಪ್ರಾಯ ಪಡೆಯಲು ಅನುಮತಿ ಕೋರಿರುವ ಮೇರೆಗೆ, ಜಿಲ್ಲಾಧಿಕಾರಿಗಳ ಕಛೇರಿಯಿಂದ ದಿ: 12.06.2020ರ ಪತ್ರದಲ್ಲಿ ನೀಡಿದ್ದ ಅನುಮತಿಯ ಮೇರೆಗೆ ನಿರ್ದೇಶಕರು, ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ರವರಿಗೆ ದಿನಾಂಕ: 13.07.2020ರಂದು ಪತ್ರ ಬರೆಯಲಾಗಿದ್ದು, ಸದರಿ ಮಂಜೂರಾತಿಯು ಅನುಮಾನಾಸ್ಪದವಾಗಿರುತ್ತದೆಂದು ವಿಧಿ ವಿಜ್ಞಾನ ಪ್ರಯೋಗಾಲಯದಿಂದ ದಿನಾಂಕ: 16.09.2020 ರಂದು ಲಿಖಿತ ಅಭಿಪ್ರಾಯ ಬಂದಿರುತ್ತದೆ. ಸದರಿಯವರ ಅಭಿಪ್ರಾಯದ ಮೇರೆಗೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯಕ್ಕೆ ದಾಖಲಾತಿಗಳೊಂದಿಗೆ ವರದಿ ಸಲ್ಲಿಸಲಾಗುವುದು. |

ಸಂಖ್ಯೆ: ಆರ್‌ಡಿ 120 ಎಲ್‌ಜಿಕ್ಯೂ 2020

(ಆರ್. ಅಶೋಕ)
ಕಂದಾಯ ಸಚಿವರು.